ನಿಮ್ಮೊಡನೆ

# ಪಾಲಕರೂ ಪಾಸಾಗಲಿ

ಪಿಯುಸಿ ಫಲಿತಾಂಶ ಬಂದಿದೆ. ಬಹುತೇಕ ಮಕ್ಕಳು ಅತಿಹೆಚ್ಚು ಅಂಕಗಳನ್ನು ಗಳಿಸಿ ಅಚ್ಚರಿ ಹುಟ್ಟಿಸಿದ್ದಾರೆ. ಭಾಷಾ ವಿಷಯಗಳಲ್ಲಿಯೂ ಪೂರ್ಣ ಅಂಕಗಳನ್ನು ಗಳಿಸಿದ ಮಕ್ಕಳಿದ್ದಾರೆ. ಆ ಮಕ್ಕಳ ಉತ್ತರ ಪತ್ರಿಕೆಗಳನ್ನು ಬಹಿರಂಗಗೊಳಿಸಿದರೆ ಉಳಿದ ಮಕ್ಕಳಿಗೂ ಸ್ಫೂರ್ತಿ ತುಂಬೀತು.

ಪಿಯುಸಿ ಮಕ್ಕಳ ಫಲಿತಾಂಶವು ಬಂದಿದೆ. ಒಂದಷ್ಟು ಮನೆಗಳಲ್ಲಿ ಸಂತಸದ ಹೊನಲು. ಇನ್ನಷ್ಟು ಮಕ್ಕಳ ಮನೆಗಳಲ್ಲಿ ನಿರಾಸೆಯ ನಿಟ್ಟುಸಿರು. ತಮ್ಮ ನಿರೀಕ್ಷೆಗೆ ತಕ್ಕ ಫಲಿತಾಂಶ ಬಂದಿಲ್ಲವೆಂಬುದು ಪಾಲಕರ ಅಸಮಾಧಾನ. ಈಗಿರುವ ಸಂಬಳದಲ್ಲಿ ಸರಕಾರಿ ಸೀಟು ಸಿಗದಿದ್ದರೆ ಓದಿಸುವುದೇ ಕಷ್ಟ ಎಂಬ ವಾಸ್ತವದ ಕಹಿ ಪಾಲಕರ ಎಣಿಕೆಯಲ್ಲಿದೆ.

ವೃತ್ತಿಪರ ಕೋರ್ಸುಗಳೇ ಎಲ್ಲದಕ್ಕೂ ಪರಿಹಾರವಲ್ಲ. ಮೂರು ವರ್ಷಗಳಲ್ಲಿ, ಐದಾರು ವರ್ಷಗಳಲ್ಲಿ ತಮ್ಮ ಕಾಲ ಮೇಲೆ ನಿಲ್ಲುವರು ಎಂಬ ನಿರೀಕ್ಷೆ ಇಟ್ಟುಕೊಂಡ ಪೋಷಕರೀಗ ಪದವಿಗೆ ಮೂರು, ಸ್ನಾತಕೋತ್ತರ ಪದವಿಗೆ ಎರಡು, ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗೆಂದೇ ಒಂದೆರಡು ವರ್ಷ ಎಂಬೆಲ್ಲ ಲೆಕ್ಕಾಚಾರ ಇಟ್ಟುಕೊಂಡಿರುತ್ತಾರೆ. ಪದೇ ಪದೇ ಸರಕಾರಿ ಸೀಟಿಗೆ ಬೇಕಿರುವಷ್ಟು ಅಂಕ ತೆಗೆಯಲಿಲ್ಲ ಎಂಬ ಅಸಮಾಧಾನ, ಶುಲ್ಕ ಕಟ್ಟಲಾಗದು ಎಂಬ ಅಸಹಾಯಕತನ ಎರಡೂ ಸೇರಿ ಮಕ್ಕಳನ್ನು ಮೂದಲಿಸುವ, ಟೀಕಿಸುವ ಕೆಲಸ ಆರಂಭವಾಗಿರುತ್ತದೆ.

ಪಾಲಕರ ಲೆಕ್ಕಾಚಾರ ತಪ್ಪಾಗಿದೆ. ಮಕ್ಕಳೂ ನಿಮ್ಮಷ್ಟೇ ಅಸಹಾಯಕರು. ಅವರ ಬುದ್ಧಿಮತ್ತೆಗೆ ತಕ್ಕಷ್ಟೇ ಅಂಕಗಳನ್ನು ಅವರು ತೆಗೆಯಬಲ್ಲರು. ಒಮ್ಮೆ ಸಮಾಧಾನದಿಂದ ಅವರ ಆಯ್ಕೆ, ಆಸಕ್ತಿಗಳನ್ನು ಕೇಳಿ ತಿಳಿಯಿರಿ. ಅವರಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ವಿವರಿಸಿ. ಅವರ ಆಯ್ಕೆಗೆ ಅನುಸಾರವಾದ ವಿಷಯ ಅಧ್ಯಯನ ಮಾಡಲು ಬಿಟ್ಟರೆ ತಮ್ಮ ಹಾದಿಯನ್ನು ತಾವೇ ಸುಗಮಗೊಳಿಸಿಕೊಳ್ಳುತ್ತಾರೆ.

ಈಗ ಕಲಾ ಮಾಧ್ಯಮದಲ್ಲಿಯೂ ಮಾನವೀಯ ಶಾಸ್ತ್ರಗಳಲ್ಲಿಯೂ ಸಾಕಷ್ಟು ಕೋರ್ಸುಗಳಿವೆ. ಪ್ರತಿಯೊಂದು ಕೋರ್ಸಿಗೂ ಸಾಕಷ್ಟು ಉದ್ಯೋಗಾವಕಾಶಗಳೂ ಇವೆ. ಉದ್ಯೋಗಾರ್ಹತೆ ನೀಡುವ ಕೋರ್ಸುಗಳೂ ಇವೆ. ನಿಮ್ಮ ನಿರೀಕ್ಷೆಯ, ಕನಸಿನ ಹೊರೆಯನ್ನು ಮಕ್ಕಳ ಮೇಲೆ ಹಾಕದಿರಿ.

ಪಿಯುಸಿಯ ನಂತರದ ಹಾದಿಯನ್ನು ಸುಗಮಗೊಳಿಸಲು, ಸ್ಪಷ್ಟವಾಗಿಸಲು ಪಾಲಕರ ಸಹಾಯ ಬೇಕು. ವೃತ್ತಿಪರ ಕೋರ್ಸುಗಳು, ವೈದ್ಯಕೀಯ ಕೋರ್ಸು ಮಾತ್ರ ಎಂದುಕೊಂಡವರೂ ಒಮ್ಮೆ ನಿಡಿದಾದ ಉಸಿರೆಳೆದುಕೊಳ್ಳಿ. ಮಗುವಿಗೆ ಸಹಾಯವಾಗುವಂತೆ ವರ್ತಿಸಿ. ಬೇರೆ ಕೋರ್ಸುಗಳ ಬಗ್ಗೆ ತಿಳಿಸಿಕೊಡುವ ಸಮಯ ಇದು. ಈ ಸಮಯದಲ್ಲಿ ಸಂಯಮದಿಂದ ವರ್ತಿಸುವುದು, ಮಗುವಿಗೆ ಅಡೆತಡೆಯಾಗಿದ್ದೇನು ಎಂದು ಅವಲೋಕಿಸುವ ಸಮಯ. ಮುಂದೇನು ಮಾಡಬೇಕು ಎಂದು ನಿರ್ಧರಿಸುವ ಸಮಯ. ಈ ಸಮಯದಲ್ಲಿ ಮಕ್ಕಳೊಂದಿಗೆ ಪಾಲಕರೂ ಪಾಸಾಗಬೇಕಾದ ಅನಿವಾರ್ಯವಿದೆ.

ಇತ್ತೀಚಿನ ವರ್ಷಗಳಲ್ಲಿ ಹೆಚ್ಚು ಅಂಕ ಗಳಿಸುವುದೂ ಸಾಮಾನ್ಯವಾಗುತ್ತಿದೆ. ನಮ್ಮ ಶಿಕ್ಷಣ ನೀತಿಯು ಯಾರೂ ನಪಾಸಾಗದಂತೆ ನೋಡಿಕೊಳ್ಳುತ್ತಿರುವುದು ದಿಟ. ಇಲ್ಲಿ ಹೆಚ್ಚು ಅಂಕ ಗಳಿಸಿದವರು ಮುಂದಿನ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಲ್ಲಿ ನಿರೀಕ್ಷಿತ ಅಂಕಗಳನ್ನು ತರಲಾಗುತ್ತಿಲ್ಲ. ಪ್ರತಿ ಪರೀಕ್ಷೆಗಳೂ ಮುಂದಿನ ಪರೀಕ್ಷೆಯನ್ನು ಸರಳಗೊಳಿಸುವ ತಯಾರಿಯಂತಿರಬೇಕು. ಆದರೆ ಉನ್ನತ ಅಧ್ಯಯನದ ಪ್ರವೇಶ ಪರೀಕ್ಷೆಗಳನ್ನು ಜಟಿಲಗೊಳಿಸುವಂಥ ಈ ಪರೀಕ್ಷಾ ಕ್ರಮದ ಕುರಿತೂ ಚರ್ಚೆಯಾಗಬೇಕಿದೆ.

ಭಾಷಾ ವಿಷಯಗಳಲ್ಲಿ ಪೂರ್ಣ ಅಂಕ ಗಳಿಸಿದ ವಿದ್ಯಾರ್ಥಿಗಳು ಅಭಿನಂದನಾರ್ಹರು. ಅವರ ಬೋಧಕರೂ. ಈ ಮಕ್ಕಳ ಉತ್ತರ ಪತ್ರಿಕೆಗಳನ್ನು ಪಿಯು ಮಂಡಳಿ ಬಹಿರಂಗಗೊಳಿಸಬೇಕು. ಅದು ಉಳಿದ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತದೆ. ಹೇಗೆ ಬರೆಯಬೇಕು, ಏನು, ಎಷ್ಟು ಬರೆಯಬೇಕು ಎಂಬ ಗೊಂದಲಗಳಿಗೆ ಸ್ಪಷ್ಟವಾದ ಉತ್ತರ ನೀಡುತ್ತವೆ. ಭಾಷಾ ಕೌಶಲ ಬೆಳೆಸುವುದರಲ್ಲಿ, ಉಳಿದ ಮಕ್ಕಳಿಗೆ ಪ್ರೇರಣೆ ನೀಡುವಲ್ಲಿ ಈ ಕ್ರಮವು ಶ್ಲಾಘನೀಯವಾಗುತ್ತದೆ.

ಪಿಯುಸಿಯನ್ನು ಬದುಕಿನ ತಿರುವು ಎಂದೇ ಪಾಲಕರು ನಂಬಿಸಿರುತ್ತಾರೆ. ಪೋಷಕರ ಭರವಸೆಯನ್ನು ಪೂರೈಸುವ ಕನಸೂ ಎಳೇ ಮನಸಿನಲ್ಲಿರುತ್ತದೆ. ಈ ತಿರುವು ಪೂರ್ವ ನಿರ್ಧಾರಿತ ದಾರಿಯತ್ತ ಸಾಗದಿದ್ದರೂ ತೊಂದರೆ ಇಲ್ಲ ಎಂಬ ಭರವಸೆಯನ್ನು ಪೋಷಕರು ತುಂಬಬೇಕು. ಆತ್ಮವಿಶ್ವಾಸದ, ಆತ್ಮಗೌರವದ ಹಾದಿ ನಿರ್ಮಾಣ ಮಾಡಿಕೊಳ್ಳುವ ಕಸುವು, ಕನಸು ನಮ್ಮ ಮಕ್ಕಳಿಗೆ ಇದ್ದೇ ಇರುತ್ತದೆ. ಅದನ್ನು ಗುರುತಿಸಿ, ಬೆಂಬಲಿಸುವ ಸಮಯವಿದು.

ಬದುಕು ಮುಗಿದೇ ಹೋಯಿತು ಎಂಬಂತೆ ಪಾಲಕರೇ ಮಾತನಾಡಿದರೆ ಹದಿಹರೆಯದವರು ಧೃತಿಗೆಡುತ್ತಾರೆ. ಹೆತ್ತವರ ನಿರಾಸೆಯನ್ನು ನೋಡಲಾಗದೇ ದುರ್ಬಲ ಗಳಿಗೆಯಲ್ಲಿ ಕೆಟ್ಟ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಈ ಪರೀಕ್ಷಾ ಸಮಯ, ಫಲಿತಾಂಶದ ಸಮಯದಲ್ಲಿ ವಿದ್ಯಾರ್ಥಿಗಳೊಂದಿಗೆ ಬದುಕನ್ನು ಸ್ವೀಕರಿಸುವ ಪಾಲಕರಿಗೂ ಪಾಸು ಆಗುವ ಅನಿವಾರ್ಯವಿದೆ. ಅಂಕಗಳಿಗಿಂತಲೂ ಬದುಕು ದೊಡ್ಡದು ಎಂಬ ಪಾಠ ಪಾಲಕರೇ ಮಕ್ಕಳಿಗೆ ನೀಡಬೇಕಿದೆ.

**ರಶ್ಮಿ ಎಸ್**




ವಿಜಯ